ಶ್ರೀ ಗುರುಭ್ಯೋ ನಮಃ

ಪುತ್ತೂರಿನ ಆನಂದ ಕುಟೀರದಲ್ಲಿ ಸದಾ ಸರ್ವದಾ ನಗು ನಗುತ ಇದ್ದು, ಹತ್ತಿರ ಬಂದ ಎಲ್ಲರನ್ನೂ ನಗಿಸುತ್ತಿದ್ದ ಪ್ರೀತಿಯ 'ಅಜ್ಜ' ಬ್ರಹ್ಮಲೀನರಾದರು.

ಅವರು ಶರೀರಧಾರಿಗಳಾಗಿದ್ದಾಗ್ಯೂ ಬ್ರಹ್ಮಸ್ವರೂಪರೇ ಆಗಿದ್ದರು.

ನಾನು ನೀನವನು ತಾನೆನುತ ಗುರುತಿಸಿಕೊಳ್ಳುವ
ಭಾವ ಭಕ್ತಿ ಸಮಾನವೆಲ್ಲರಿಗುಂ
ನಾನಾ ಪ್ರಪಂಚವನು ಅಂತೊಂದುಗೂಡಿಪ
ಜ್ಞಾನಸೂತ್ರವೆ ಬೊಮ್ಮ - ಮರುಳಮುನಿಯ.

ಎಂದರು ಡಿ.ವಿ.ಜಿಯವರು

ಮಹರ್ಷಿ ರಮಣರು ಇಂತೆಂದರು ತಮ್ಮ ಸತ್-ದರ್ಶನದಲ್ಲಿ-

ಅಜ್ಞಸ್ಯ ವಿಜ್ಞಸ್ಯ ಚ ವಿಶ್ವಮಸ್ತಿ
ಪೂರ್ವಸ್ಯ ದೃಶ್ಯಂ ಜಗದೇವ ಸತ್ಯಂ
ಅನ್ಯಸ್ಯ ದೃಶ್ಯಾಶ್ರಯಭೂತಮೇಕಂ
ಸತ್ಯಂ ಪ್ರಪೂರ್ಣಂ ಪ್ರವಿಭಾತ್ಯರೂಪಂ

ಅಜ್ಞಾನಿಯೂ 'ನಾನು' ಎನ್ನುತ್ತಾನೆ.ಆತ್ಮಜ್ಞಾನಿಯೂ 'ನಾನು' ಎನ್ನುತ್ತಾನೆ.ಆದರೆ-ಅಜ್ಞಾನಿಗೆ ದೇಹವೇ 'ನಾನು'. ಆತ್ಮಜ್ಞಾನಿಯು 'ನಾನು' ಎನ್ನುವಾಗ - ಈ ನಾನು ದೇಹದ ಒಳಗಲ್ಲ-ಅದು ಒಳಗೆ-ಹೊರಗೆ, ಎಲ್ಲಾಕಡೆ ವ್ಯಾಪಿಸಿರುವ ಪರಮಾತ್ಮನೇ-'ನಾನು'.

-'ಅಜ್ಜ'- ದೇಹಭಾವನೆಯಲ್ಲಿರಲಿಲ್ಲ. ಸಾಮಾನ್ಯರಂತೆ-'ನಾನು ದೇಹ' ಎಂಬ ದೇಹತಾದಾತ್ಮ್ಯ ಭಾವವನ್ನು ಮೀರಿ, ಬ್ರಹ್ಮಾಹಮಸ್ಮಿ-ಅರ್ಥಾತ್ ಎಲ್ಲೆಲ್ಲೂ ಬೆಳಗುವ, ಎಲ್ಲವನ್ನೂ ಬೆಳಗುವ ಪರಬ್ರಹ್ಮಸ್ವರೂಪವೇ ಅವರಾಗಿದ್ದರು!ಅವರು ಅಸಾಮಾನ್ಯರಾಗಿದ್ದರು!

ನಮ್ಮೆಲ್ಲರ ಮನಸ್ಸು ಸ್ಪಂದಿಸುತ್ತಲೇ ಇರುತ್ತದೆ. ಮನಸ್ಸಿನ ಸ್ಪಂದನವೇ ಬಂಧನ! ಮನಸ್ಸು ತನ್ನ ರಜೋಗುಣಕ್ಕೆ ತಕ್ಕಂತೆ ಸಹಜವಾಗಿ ಕುಣಿಯುವಾಗ ಬೆಳಗ್ಗೆ ನಾವು ಏಳುವುದು.ಬೆಳಗ್ಗೆ ಎದ್ದಕೂದಲೇ ದೇಹ, ಮನಸ್ಸು ಮತ್ತು ಬುದ್ಧಿಗಳೊದನೇ ತಾದಾತ್ಮ್ಯಹೊಂದಿ ದೇಹಕ್ಕೆ ಅಂಟಿಕೊಳ್ಳುವುದು.ಸರ್ವವ್ಯಾಪಿಯೂ , ಆನಂದಸ್ವರೂಪನೂ, ಜನನಮರಣ ರಹಿತನೂ ಆದ 'ನಾನು'-ದೇಹಕ್ಕೆ ಅಂಟಿಕೊಂಡ ಕೂಡಲೇ-'ಜೀವ'ನಾದೆ.ಆ ಕೂಡಲೇ ಜಗತ್ತು ಬೇರೆಯಾಗಿ ಕಾಣಿಸುವುದು.ಆ ನಂತರ ಜಗತ್ತಿನ
ವಸ್ತುಗಳತ್ತ ನಮ್ಮ ನಾಗಾಲೋಟ! ಅಲ್ಲಿ ವಸ್ತುಗಳಲ್ಲಿ ಸುಖ ಇದೆ ಎಂದು. ಇದು ಭ್ರಾಂತಿ!

ಅಜ್ಜ ಹಾಗಿರಲಿಲ್ಲ. ಅವರ ಮನಸ್ಸು ಕುಣಿಯುತ್ತಿರಲಿಲ್ಲ. ಅದು ಸತ್ವಪೂರ್ಣವಾಗಿತ್ತು.!

ಅದು ಪ್ರಾಶಾಂತವಾಗಿತ್ತು. ಆದುದರಿಂದ ಅವರು ದೇಹಕ್ಕೆ ಅಂಟಿಕೊಂಡಿರಲಿಲ್ಲ.ಅವರು ಆತ್ಮನಿಷ್ಠರಾಗಿದ್ದರು. 'ನಾನು' ಬೇರೆ, ಜಗತ್ತು ಬೇರೆ, ಈಶ್ವರ ಬೇರೆ ಎಂಬ ತ್ರಿಪುಟಿಗಳು ಅವರಲಿಲ್ಲ. ಅವರಿಗೆ ಹಗಲು ರಾತ್ರಿಗಳ ವ್ಯತ್ಯಾಸವೂ ಇಲ್ಲ.ಅರ್ಥಾತ್ ಇವೆಲ್ಲಾ(ದೇಶ, ಕಾಲ, ವಸ್ತು ಪರಿಚ್ಛೇದಗಳು) ಮನಸ್ಸು ನಮಗೆ ತೋರಿಸುವ ಭ್ರಾಂತಿಗಳು! ಮನಸ್ಪಂದನವನ್ನು ಮೀರಿಹೋಗಿ, ತಮ್ಮ ಆತ್ಮಸ್ವರೂಪದಲ್ಲಿ ನೆಲೆನಿಂತ, ಸಮಾಧಿಸ್ಥ ಮಹಾಪುರುಷ- 'ಅಜ್ಜ.'

ಅಜ್ಜನ ಸ್ಮರಣೆ- ಪರಮಾತ್ಮನ ಸ್ಮರಣೆ!

ಅಂತಹ ನಾರಾಯಣ ಸ್ವರೂಪರಿಗೆ ನಮೋ!ನಮಃ!!!

ಸ್ವಾಮಿ ಬ್ರಹ್ಮಾನಂದ